### ವೈದ್ಯ ಸೇವೆಯಲ್ಲಿ ಟ್ಯಾಬ್ಲೆಟ್ ಬಳಕೆ

ಟ್ಯಾಬ್ಲೆಟ್ ಎಂದ ತಕ್ಷಣ ಗುಳಿಗೆ ಅಥವಾ ಮಾತ್ರೆ ಎಂದುಕೊಳ್ಳಬೇಡಿ. ನೆಟ್‌ಪ್ಯಾಡ್ ಅಥವಾ ಟ್ಯಾಬ್ಲೆಟ್ ಬಹುಉಪಯೋಗಿ ಗ್ಯಾಜೆಟ್. ಇದನ್ನು ವೈದ್ಯ ಸೇವೆಯಲ್ಲಿ ಬಳಸಲು ಸರ್ಕಾರ ಸ್ಯಾಮ್‌ಸಂಗ್ ಸಹಯೋಗದೊಂದಿಗೆ ವೈದ್ಯರು ಮತ್ತು ತಳಮಟ್ಟದ ಕಾರ್ಯಕರ್ತರಿಗೆ 1,000 ಟ್ಯಾಬ್ಲೆಟ್ / ನೆಟ್‌ಪ್ಯಾಡ್ ಉಚಿತವಾಗಿ ವಿತರಿಸಿದೆ. ಆರೋಗ್ಯ ಇಲಾಖೆ ವತಿಯಿಂದ ನೀಡುತ್ತಿರುವ ವಿವಿಧ ಸೇವೆಗಳು ಮತ್ತು ಮಾಹಿತಿಗಳನ್ನು ಇದರಲ್ಲಿ ದಾಖಲಿಸಿ ಇಟ್ಟುಕೊಳ್ಳಬಹುದು. ಪ್ರತಿಯೊಬ್ಬ ರೋಗಿಯ ಸಂಪೂರ್ಣ ಮಾಹಿತಿಯನ್ನು ವೈದ್ಯರು ಮತ್ತು ಕಾರ್ಯಕರ್ತರು ತಮ್ಮ ಬಳಿ ಇಟ್ಟುಕೊಳ್ಳುವುದರಿಂದ ಹೆಚ್ಚಿನ ನಿಗಾ ವಹಿಸಲು ಸಾಧ್ಯವಾಗುತ್ತದೆ.




ಯೋಜನೆ ಉತ್ತಮ ನಿದರ್ಶನ. ಬರಪೀಡಿತ ಪ್ರದೇಶದಲ್ಲಿ ಆತ್ಮಹತ್ಯೆ ಮಾಡಿಕೊಂಡ ರೈತರ ಕುಟುಂಬಗಳ ಸದಸ್ಯರ ಆರೋಗ್ಯದ ನೆರವಿಗೆ ಬರುವ ಯೋಜನೆ ಇದಾಗಿದೆ. ಆಯಾಯ ಜಿಲ್ಲೆಗಳ ಜಿಲ್ಲಾಧಿಕಾರಿಗಳೇ ಫಲಾನುಭವಿಗಳನ್ನು ಗುರುತಿಸುತ್ತಾರೆ. ಬಳಿಕ ಅದರ ಮಾಹಿತಿಯನ್ನು ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್‌ಗೆ ನೀಡುತ್ತಾರೆ. ಫಲಾನುಭವಿಗಳಿಗೆ ಗುರುತಿನ ಚೀಟಿ ನೀಡಲಾಗುತ್ತದೆ. ಇವರಿಗೆ ಎರಡನೇ ಮತ್ತು ಮೂರನೇ ಹಂತದ ಕಾಯಿಲೆಗಳಿಗೆ ಗುಣಮಟ್ಟದ ಚಿಕಿತ್ಸೆಯನ್ನು ನೀಡಲಾಗುತ್ತದೆ.

ಇದೇ ರೀತಿ ಗುಡ್ಡಗಾಡು ಮತ್ತು ದುರ್ಗಮ ಪ್ರದೇಶಗಳಲ್ಲಿ ವಾಸಿಸುವ ದೀನ– ದಲಿತರು ಮತ್ತು ಬುಡಕಟ್ಟು ವಾಸಿಗಳಿಗೆ ಮನೆ ಬಾಗಿಲಿನಲ್ಲೇ ಚಿಕಿತ್ಸೆ ನೀಡಲು 84 ಸಂಚಾರಿ ಆರೋಗ್ಯ ಘಟಕಗಳನ್ನು ಆರಂಭಿಸಲಾಗಿದೆ. ಸುಸಜ್ಜಿತ ಆ್ಯಂಬುಲೆನ್ಸ್‌ನಲ್ಲಿ ವೈದ್ಯರು, ಶುಶ್ರೂಷಕರು, ತಂತ್ರಜ್ಞರು ಇರುತ್ತಾರೆ. ಅವಶ್ಯಕ ಉಪಕರಣಗಳು ಮತ್ತು ಔಷಧಿಗಳೊಂದಿಗೆ ಈ ಪ್ರದೇಶಗಳಿಗೆ ತೆರಳುತ್ತಾರೆ. ರೋಗಿಗಳನ್ನು ಪರೀಕ್ಷಿಸಿ ಅಗತ್ಯವಿರುವ ಔಷಧೋಪಚಾರವನ್ನು ನೀಡಲಾಗುತ್ತದೆ.

### ಕ್ರಾಂತಿಕಾರಿ ಕೆಪಿಎಂಇ ಕಾಯ್ದೆ

ಸಾಕಷ್ಟು ವಿರೋಧಗಳ ಮಧ್ಯೆ ಖಾಸಗಿ ವೈದ್ಯಕೀಯ ಕ್ಷೇತ್ರವನ್ನು ನಿಯಂತ್ರಿಸಲು ಕೆ.ಪಿ.ಎಂ.ಇ ಮಸೂದೆಗೆ ತಿದ್ದುಪಡಿ ತರಲಾಯಿತು. ಕಾರ್ಪೊರೇಟ್ ಆಸ್ಪತ್ರೆಗಳು ಮತ್ತು ಖಾಸಗಿ ಆಸ್ಪತ್ರೆಗಳು ಸಾರ್ವಜನಿಕರನ್ನು ಶೋಷಣೆ ಮಾಡುತ್ತವೆ ಎಂಬ ದೂರು ಬಹಳ ಹಿಂದಿನಿಂದಲೂ ಇತ್ತು. ಹಣ ಇಲ್ಲದೆ ಕೆಲವು ಖಾಸಗಿ ಆಸ್ಪತ್ರೆಗಳ ಮೆಟ್ಟಿಲು ಹತ್ತಲೂ ಆಗುತ್ತಿರಲಿಲ್ಲ. ಆಸ್ಪತ್ರೆಯಲ್ಲಿ ಸತ್ತವರ ಶವ ತರಲು ಆಗುವುದಿಲ್ಲ ಎಂಬ ಸ್ಥಿತಿ ಇತ್ತು.

ಈ ಸ್ಥಿತಿಯನ್ನು ಸಂಪೂರ್ಣವಾಗಿ ಬದಲಿಸಿ ಜನಪರ ಕಾಯ್ದೆ ತರಲು ಪಟ್ಟು ಹಿಡಿದು ಶ್ರಮಿಸಿದ್ದು, ಆರೋಗ್ಯ ಸಚಿವ ಕೆ.ಆರ್.ರಮೇಶ್ ಕುಮಾರ್. ಖಾಸಗಿ ಆಸ್ಪತ್ರೆಗಳವರು ಎರಡೆರಡು ಸಲ ಮುಷ್ಕರ ನಡೆಸಿದರು. ಇದರಿಂದ ಸಾರ್ವಜನಿಕರಿಗೆ ತೊಂದರೆ ಆಯಿತು. ಬಡವರ ಪರವಾದ ಕಾನೂನು ರೂಪಿಸಲು ರಮೇಶ್ ಕುಮಾರ್ ತಮ್ಮ ಪಟ್ಟು ಸಡಿಲಿಸಲಿಲ್ಲ. ಕೊನೆಗೂ ವಿಧಾನಮಂಡಲದಲ್ಲಿ ಮಸೂದೆಗೆ ಅಂಗೀಕಾರ ಪಡೆಯುವಲ್ಲಿ ಸರ್ಕಾರ ಸಫಲವಾಯಿತು. ಚಿಕಿತ್ಸೆಗಳ ಶುಲ್ಕ ನಿಗದಿ ಮಾಡುವಲ್ಲಿ ಸರ್ಕಾರದ ನಿಯಂತ್ರಣವಿರುತ್ತದೆ. ಚಿಕಿತ್ಸೆಗಳ ದರ ನ್ಯಾಯೋಚಿತವಾಗಿಯೇ ಇರುತ್ತದೆ. ರೋಗಿಗಳಿಗೆ ಅನ್ಯಾಯ ಆಗಿದೆ ಎಂದು ಕಂಡು ಬಂದರೆ, ಮೇಲ್ಮನವಿ ಸಲ್ಲಿಸುವುದಕ್ಕೆ ಅವಕಾಶ ಇದೆ. ವೈದ್ಯರು ಅಥವಾ ಆಸ್ಪತ್ರೆಗಳು ತಪ್ಪು ಮಾಡಿವೆ ಎಂಬುದು ಸಾಬೀತಾದರೆ ಕ್ರಮ ಕೈಗೊಳ್ಳಲೂ ಅವಕಾಶವಿದೆ. ಇನ್ನು ಮುಂದೆ ಅಮಾಯಕರನ್ನು ಯಾರೂ ಶೋಷಣೆ ಮಾಡಲು ಸಾಧ್ಯವಿಲ್ಲದ ಬಲಿಷ್ಠ ಕಾನೂನು ಜಾರಿ ಮಾಡಿದ ಕೀರ್ತಿ ಕರ್ನಾಟಕಕ್ಕೆ ಸಲ್ಲುತ್ತದೆ.

### ಮೂಲೆ ಮೂಲೆಗೂ ತಲುಪುತ್ತಿರುವ ಟೆಲಿ ಮೆಡಿಸಿನ್

ಗ್ರಾಮಾಂತರ ಪ್ರದೇಶದ ಬಡ ರೋಗಿಗಳಿಗೆ ಸೂಪರ್ ಸ್ಪೆಷಾಲಿಟಿ ತಜ್ಞ ವೈದ್ಯ ಸೇವೆಯನ್ನು ನೀಡಲು ಟೆಲಿ ಮೆಡಿಸಿನ್ ಮತ್ತು ಟೆಲಿ ರೇಡಿಯಾಲಜಿಯನ್ನು ಯಶಸ್ವಿಯಾಗಿ ಬಳಸಲಾಗುತ್ತಿದೆ. ಟೆಲಿ ಕಾನ್ಫೆರೆನ್ಸಿಂಗ್ ಮೂಲಕ ಮಾಹಿತಿ ವಿನಿಮಯ ಮಾಡಿಕೊಳ್ಳುವ ಮೂಲಕ ತ್ವರಿತಗತಿಯಲ್ಲಿ ಸಲಹೆಗಳನ್ನು ನೀಡುವುದರ ಜೊತೆಗೆ ಚಿಕಿತ್ಸೆ ನೀಡಲಾಗುತ್ತದೆ. ರಾಷ್ಟ್ರೀಯ ಆರೋಗ್ಯ ಅಭಿಯಾನ(ಎನ್‌ಎಚ್‌ಎಂ) ಯೋಜನೆಯಡಿ ಎಲ್ಲ ತಾಲ್ಲೂಕು ಆಸ್ಪತ್ರೆ ಮತ್ತು ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ಈ ಸೇವೆಯನ್ನು ಒದಗಿಸಲಾಗುತ್ತಿದೆ.

### ಖಿನ್ನತೆ ವಿರುದ್ಧ ಸಮರ

ಇತ್ತೀಚಿನ ವರ್ಷಗಳಲ್ಲಿ ಖಿನ್ನತೆ ಎಲ್ಲರನ್ನೂ ಕಾಡುತ್ತಿರುವ ಮಾನಸಿಕ ಸಮಸ್ಯೆ. ಇದು ಒಂದಲ್ಲ ಒಂದು ಹಂತದಲ್ಲಿ ಪ್ರತಿಯೊಬ್ಬರನ್ನೂ ಕಾಡಿರುತ್ತದೆ. ಖಿನ್ನತೆಯಿಂದ ಬಳಲುತ್ತಿರುವವರನ್ನು ಆ ಸಮಸ್ಯೆಯಿಂದ ಮುಕ್ತಗೊಳಿಸಿ, ಸಹಜವಾಗಿ ಜೀವನ ಸಾಗಿಸಲು ಅನುಕೂಲವಾಗಲು ಹಲವು ಕಾರ್ಯಕ್ರಮಗಳನ್ನು ಆರೋಗ್ಯ ಇಲಾಖೆ ಹಮ್ಮಿಕೊಂಡಿತ್ತು. ಖ್ಯಾತ ಚಿತ್ರ ನಟಿ ದೀಪಿಕಾ ಪಡುಕೋಣೆ ಇಂತಹದ್ದೊಂದು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. 'ಮುಕ್ತವಾಗಿ ಮಾತನಾಡೋಣ' ಎಂಬ ಹೆಸರಿನ ಈ ಕಾರ್ಯಕ್ರಮದಡಿ ಗ್ರಾಮಾಂತರ ಪ್ರದೇಶದಲ್ಲಿ ಖಿನ್ನತೆಯಿಂದ ಬಳಲುತ್ತಿರುವವರನ್ನು ಭೇಟಿ ಮಾಡಿ, ಅದರಿಂದ ಮುಕ್ತಗೊಳ್ಳುವುದು ಹೇಗೆ ಎಂಬುದನ್ನು ವಿವರಿಸಿದ್ದರು. ಇದು ಕರ್ನಾಟಕ ಮಾನಸಿಕ ಆರೋಗ್ಯ ಕಾರ್ಯಕ್ರಮಗಳಿಗೆ ಹೊಸ ಆಯಾಮವನ್ನೇ ನೀಡಿತು.

ಯಾವ ಸರ್ಕಾರಕ್ಕೆ ಎಲ್ಲ ಪ್ರಜೆಗಳ ಆರೋಗ್ಯವನ್ನು ಕಾಪಾಡುವ ಶಕ್ತಿ, ಸಾಮರ್ಥ್ಯ, ಆಲೋಚನೆ ಇರುತ್ತದೆಯೋ ಅಂತಹ ಸರ್ಕಾರವನ್ನು ಯೋಗ್ಯ ಸರ್ಕಾರ ಎನ್ನಲು ಸಾಧ್ಯ. ಆ ನಿಟ್ಟಿನಲ್ಲಿ ಸಿದ್ದರಾಮಯ್ಯ ಸರ್ಕಾರ ಕಾರ್ಯ ನಿರ್ವಹಿಸು ತ್ತಿದೆ. ರಾಜ್ಯದ ಯಾವ ಭಾಗದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಜನರಿಗೆ ಹತ್ತಿರದಲ್ಲಿ ಇಲ್ಲವೊ ಅಲ್ಲಿಗೆ ಅಂದರೆ ಪ್ರತಿ 10 ರಿಂದ 15 ಕಿ.ಮೀ ವ್ಯಾಪ್ತಿ ಯಲ್ಲಿ ವೈದ್ಯರು, ಔಷಧಿ ಮತ್ತು ವೈದ್ಯಕೀಯ ಸಲಕರಣೆಗಳನ್ನು ಒಳಗೊಂಡ ಅಂಬುಲೆನ್ಸ್ ವ್ಯವಸ್ಥೆ ಮಾಡಲಾಗಿದೆ. ಅಲ್ಲದೆ, ವಿಸ್ತರಣಾ ಘಟಕಗಳ ಮೂಲಕ ಹೊಸ ಆಸ್ಪತ್ರೆಗಳನ್ನು ಸ್ಥಾಪಿಸಲಾಗುತ್ತಿದೆ. ಇಲ್ಲಿಯವರೆಗೆ ಬಡವರಿಗೆ ಲಭ್ಯವಿರದಿದ್ದ ಎಂಆರ್‌ಐ, ಸಿ.ಟಿ ಸ್ಕ್ಯಾನ್, ಡಯಾಲಿಸಿಸ್ ಘಟಕಗಳನ್ನು ಜಿಲ್ಲಾ ಮತ್ತು ತಾಲ್ಲೂಕು ಆಸ್ಪತ್ರೆಗಳಲ್ಲಿ ಸ್ಥಾಪಿಸಲಾಗುತ್ತಿದೆ. ಇವುಗಳ ಮೂಲಕ ಉಚಿತ ಸೇವೆ ನೀಡಲಾಗುತ್ತಿದೆ.

''ಎಲ್ಲರಿಗೂ ಆರೋಗ್ಯ; ಎಲ್ಲೆಡೆಯೂ ಆರೋಗ್ಯ''